ಪಿಡಬ್ಲೂ.2: ದಾಮೋದರ್.ಪಿ.,

<u>ದಿನಾಂಕಃ 08.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ನಾನು ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುತ್ತೇನೆ. ನಾನು ತೆರಿಗೆ ಪಾವತಿದಾರ. ನನ್ನ ವಾರ್ಷಿಕ ವರಮಾನವನ್ನು ಹೇಳಲು ಆಗುವುದಿಲ್ಲ. 2021 ನೇ ಇಸವಿಯಲ್ಲಿ ನಾನು ಆದಾಯ ತೆರಿಗೆ ವರದಿ ಸಲ್ಲಿಸಿರುತ್ತೇನೆ. ಅದರಲ್ಲಿ ಸುಮಾರು 10 ರಿಂದ 15 ಲಕ್ಷ ರೂ. ಆದಾಯದ ಬಗ್ಗೆ ವರದಿ ಮಾಡಿರುತ್ತೇನೆ. ಆರೋಪಿಗೆ 10 ಲಕ್ಷ ರೂ. ಸಾಲ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿದ್ದು ಅದನ್ನು ತೆರಿಗೆ ಪಾವತಿ ವರದಿಯಲ್ಲಿ ನಮೂದಿಸಿದ್ದೀರಾ ಎಂದರೆ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಎರಡು ಪ್ರಾಪರ್ಟಿಗಳನ್ನು ಮಾರಾಟ ಮಾಡಿಸಿ ಬಂದಂತಹ ಕಮಿಷನ್ ಹಣವನ್ನು ಮನೆಯಲ್ಲಿ ಇಟ್ಟುಕೊಂಡಿದ್ದೆನು, ಅದನ್ನು ಆರೋಪಿಗೆ ನೀಡಿದ್ದೆನು. ದೂರಿನಲ್ಲಿ ರೂ.21,50,000/- ಗಳನ್ನು ಪಿರ್ಯಾದುದಾರರು ನಿಮ್ಮಿಂದ ಪಡೆದುಕೊಂಡಿರುವ ಬಗ್ಗೆ ನಮೂದಿಸಿರುತ್ತಾರೆ ಎಂದರೆ ಸರಿ. ರೂ.21,50,000/- ಗಳು ನಿಮಗೆ ಎಲ್ಲಿಂದ ಬಂದಿತ್ತು ಎಂದರೆ ಸಾಕ್ಷಿಯು ನಾನು ಆರೋಪಿಗೆ 10 ಲಕ್ಷ ರೂ. ಮಾತ್ರ ನೀಡಿದ್ದೆನು ಎಂದು ನುಡಿಯುತ್ತಾರೆ. 2016 ನೇ ಇಸವಿಯ ನಂತರದಿಂದ ಹೆಚ್ಚುವರಿ ಮೊತ್ತವನ್ನು ನಗದಾಗಿ ವ್ಯವಹರಿಸಬಾರದು ಎಂದು ನಿಯಮವಿದೆ ಎಂದರೆ ಸಾಕ್ಷಿಯು ನಾನು ಎರಡು ಪ್ರಾಪರ್ಟಿಗಳನ್ನು ಮಾರಾಟ ಮಾಡಿಸಿ ಬಂದಂತಹ ಕಮಿಷನ್ ಮೊತ್ತವನ್ನು ಮನೆಯಲ್ಲಿ ಇಟ್ಟುಕೊಂಡಿದ್ದೆನು ಎಂದು ನುಡಿಯುತ್ತಾರೆ. ನೀವು ಪಿರ್ಯಾದುದಾರರಿಗೆ 10 ಲಕ್ಷ ರೂ.ಗಳನ್ನು ಬ್ಯಾಂಕ್ ಮುಖಾಂತರ ವರ್ಗಾಯಿಸಲು ತೊಂದರೆ ಇತ್ತೆ ಎಂದರೆ ಅವರು ನಗದಾಗಿ ಕೇಳಿದ ಕಾರಣ ನಗದು ರೂಪದಲ್ಲಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿಯನ್ನು ನಾನು

**ಪಿಡಬ್ಲೂ.2: ದಾಮೋದರ್.ಪಿ.,**

ಪಿರ್ಯಾದುದಾರರಿಗೆ ಹಣ ನೀಡುವ ಸಮಯದಲ್ಲಿ ನೋಡಿದ್ದೇನೆ. ಆರೋಪಿಯ ಬಗ್ಗೆ ನನಗೆ ಅಷ್ಟಾಗಿ ಪರಿಚಯವಿರುವುದಿಲ್ಲ. ನಾನು ಪಿರ್ಯಾದುದಾರರಿಗೆ ಹಣ ನೀಡಲು ಹೋದ ವೇಳೆಯಲ್ಲಿ ಅವರ ಮನೆಯಲ್ಲಿ ಬೇರೆ ಯಾರೋ ಇಬ್ಬರು ಹೆಂಗಸರು ಕುಳಿತಿದ್ದರು. ಪಿರ್ಯಾದುದಾರರು ಆರೋಪಿಗೆ ರೂ.21,50,000/- ಗಳನ್ನು ಸಾಲ ನೀಡುವ ವೇಳೆಯಲ್ಲಿ ಆರೋಪಿಯಿಂದ ಯಾವುದಾದರೂ ಲಿಖಿತ ದಾಖಲೆ ಪಡೆದುಕೊಂಡಿದ್ದಾರೆಯೇ ಎಂದರೆ ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಮತ್ತು ಪಿರ್ಯಾದುದಾರರ ನಡುವೆ ಈ ಮೊದಲು ನಡೆದ ಹಣಕಾಸಿನ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ಪಿರ್ಯಾದುದಾರರಿಗೆ ಚೆಕ್ಕು ನೀಡುವ ವೇಳೆಯಲ್ಲಿ ನಾನು ಹಾಜರಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಖಂಡಿಕೆ 6 ರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ.

**2.** ನಾನು ಹಾಗೂ ಪಿರ್ಯಾದುದಾರರು ಸ್ನೇಹಿತರಾಗಿದ್ದು, 20 ವರ್ಷಗಳಿಂದ ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುತ್ತೇವೆ. ಪಿರ್ಯಾದುದಾರರು ರಿಯಲ್ ಎಸ್ಟೇಟ್ ಬಿಸಿನೆಸ್ ಜೊತೆ ಚೀಟಿ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಪಿರ್ಯಾದುದಾರರು ಚೀಟಿ ನಡೆಸುತ್ತಿದ್ದ ಕಾರಣ ಆರೋಪಿಯ ಚೀಟಿ ವ್ಯವಹಾರದ ಭದ್ರತೆಗಾಗಿ ಪಿರ್ಯಾದುದಾರರಿಗೆ ಚೆಕ್ಕು ನೀಡಿದ್ದರು ಎಂದರೆ ಸರಿಯಲ್ಲ. ನೀವು ಪಿರ್ಯಾದುದಾರರಿಗೆ 10 ಲಕ್ಷ ರೂ. ನೀಡಿರಲಿಲ್ಲ, ಹಾಗೆಯೇ ಪಿರ್ಯಾದುದಾರರು ಆರೋಪಿಗೆ ರೂ.21,50,000/- ರೂ. ಸಾಲ ನೀಡಿರಲಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರು ನಿಮ್ಮ ಸ್ನೇಹಿತರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಿಡಬ್ಲೂ.2: ದಾಮೋದರ್.ಪಿ.,**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.